ಗಾಂಧಿ ಜಯಂತಿ ವಿಶೇಷ



# ಗಾಂಧೀಪಾಶದ ಒಳಹೊರಗೆ...

**ಗಾಂಧಿಯ ಪ್ರಯಾಣದ ಉದ್ದೇಶ ಏನಿದ್ದಿತು ಎಂದು ತಲೆಯೆತ್ತಿ ನೋಡುವ ಬದಲು ಅವರು ನಡೆದ ದಾರಿಗಳನ್ನು, ಅದರಲ್ಲಿ ಮೂಡಿದ ಹೆಜ್ಜೆಗುರುತುಗಳನ್ನೇ ಕೆದಕಿಕೊಂಡು ಕೂತರೆ ಗಾಂಧಿ ದಕ್ಕುವರೇ? ಚರಕದಲ್ಲಿ ನೂಲು ನೇಯುತ್ತ ಕೂತರೆ ನೂಲು ಸಿಕ್ಕೀತು. ಆದರೆ ಆ ಚರಕದ ಮೂಲಕ ಗಾಂಧಿ ಏನನ್ನು ಹುಡುಕಹೊರಟಿದ್ದರು ಎಂಬುದನ್ನು ತಿಳಿಯುವುದು ಹೇಗೆ?**



■ ಎ.ಪಿ. ಅಶ್ವಿನ್ ಕುಮಾರ್

ಸೀನಿಯರ್ ಫೆಲೊ, ಸೆಂಟರ್
ಫಾರ್ ಲರ್ನಿಂಗ್ ಫ್ಯೂಚರ್ಸ್,
ಅಹಮದಾಬಾದ್ ವಿ.ವಿ.

ಕೋಲು ಹನ್ನೆರಡು ಗುಂಭದಲ್ಲೊಂದು
ತಿರುಗುತ್ತಿರಲು ಚಕ್ರ
ಚಕ್ರವೇ ಇಲ್ಲ.

ಕಪ್ಪು ಮಣ್ಣಾಗುವುದು ಕುಂಭ
ತುಂಬುವ ಒಡಲೊಳಗೆ
ಕುಂಭವೇ ಇಲ್ಲ

ಮರವ ಕೆತ್ತಿದರೆ ಕದ ಕಿಟಕಿಗಳು
ನಡುವೆ ಹಾಯುವ ತಾವು
ಏನೂ ಇಲ್ಲ

ಲಾಭವೆನಿಸುವುದು ನಮಗೆ ವಸ್ತುಗಳ ಇರುವಿಕೆಯು
ಇಲ್ಲದಿರುವಿಕೆಯೇ ಉಪಯೋಗವೆನಿಸುವುದು

(ಸುಮ್ಮನಿರುವ ಸುಮ್ಮಾನ, ಲಾವೊತ್ಸೆ, ಅನುಕೃತಿ: ಎಸ್. ಮಂಜುನಾಥ, ಅಕ್ಷರ ಪ್ರಕಾಶನ, 1992)

ಸಾಬರಮತಿ ಆಶ್ರಮಕ್ಕೆ ನಮ್ಮ ಮನೆಯಿಂದ ಹದಿನೈದು ನಿಮಿಷದ ದಾರಿ. ಊರಿಂದ ಯಾರೇ ಅತಿಥಿಗಳು ಬಂದರೂ ಅವರನ್ನು ಒಮ್ಮೆ ಆಶ್ರಮಕ್ಕೆ ಕರೆದುಕೊಂಡು ಹೋಗುವುದು ನಮಗೆ ವಾಡಿಕೆ. ಬಂದವರ ಮನಸ್ಸಿನಲ್ಲಿ ಒಂದು ಘನವಾದ ಜಾಗಕ್ಕೆ ಹೋಗುತ್ತಿದ್ದೇವೆ ಎನ್ನುವ ವಿಸ್ಮಯ, ಕಾತರ. ನಮಗೂ ಅಷ್ಟೇ. ಒಂದು ಅನುಪಮವಾದ ಅನುಭವಕ್ಕೆ ನಮ್ಮ ಅತಿಥಿಗಳನ್ನು ಪರಿಚಯಿಸುತ್ತಿದ್ದೇವೆ ಎನ್ನುವ ಉತ್ಸಾಹ.

ಸಾಬರಮತಿ ಆಶ್ರಮದ ದೂಳಿನ ಪಾರ್ಕಿಂಗ್‌ನಲ್ಲಿ ಕಾರು ನಿಲ್ಲಿಸಿ ಹೊರಕ್ಕೆ ಅಡಿಯಿಡುತ್ತಲೇ ನಮ್ಮ ಉತ್ಸಾಹದ ಗುಬ್ಬಾರೆಗೆ ಸೂಜಿ ಚುಚ್ಚಿದಂತಾಗುತ್ತದೆ. ಅತಿಥಿಗಳ ರಮ್ಯವಾದ, ಪ್ರಾಂಜಲವಾದ ಅಪೇಕ್ಷೆಗಳನ್ನೆಲ್ಲ ಹುಸಿಗೊಳಿಸುತ್ತಿದ್ದೇವೇನೋ ಎನ್ನುವ ಇರುಸುಮುರುಸು. ಬಂದವರಿಗೆ ಅಲ್ಲಿ ನೋಡಲಾದರೂ ಏನಿದೆ? ಒಂದು ಸಣ್ಣ ನಾಡಹೆಂಚಿನ ಗುಡಿಸಲು. ಒಳಗೆರಡು ಸಣ್ಣ ಮಲಗುವ ಕೋಣೆ. ಚಿಕ್ಕ ಅಡುಗೆಮನೆ. ಗಾಂಧೀಜಿಯ ದಿವಾನಖಾನೆ. ಅಲ್ಲೊಂದು ಚರಕ. ದೊಡ್ಡ ಜಗುಲಿ. ಎಲ್ಲಾ ಸೇರಿ ಮೂರು ನಿಮಿಷದಲ್ಲಿ ನೋಡಿ ಮುಗಿಸಬಹುದಾದ್ದು. ಹೊರಗೆ ಇದಕ್ಕಿಂತಲೂ ಸಣ್ಣದಾದ ಇನ್ನೊಂದು ಗುಡಿಸಲು. ಒಂದು ಮೀರಾ ಬೆನ್ ಬಳಸುತ್ತಿದ್ದ ಕೋಣೆಯಂತೆ. ಮತ್ತೊಂದು ವಿನೋಬಾ ಅವರದ್ದಂತೆ. ಗಾಂಧೀಜಿಯ ಗುಡಿಸಲು 'ಹೃದಯಕುಂಜ'ದೊಳಗೆ ತೆರೆದ ತೊಟ್ಟಿಯಂತಿರುವ ಹಜಾರದಲ್ಲಿ ಒಂದೆರಡು ಮಲ್ಲಿಗೆಯ ಬಳ್ಳಿ. ಅಡುಗೆ ಕೋಣೆಯಲ್ಲಿ ಅವರು ಉಪಯೋಗಿಸುತ್ತಿದ್ದ ಪೀಕದಾನಿ, ಚಮಚ, ಕನ್ನಡಕ, ಕೋಲು, ಎರಡು ಅಡುಗೆಯ ಪಾತ್ರೆ. ಇದನ್ನು ಸಂಗ್ರಹಾಲಯ ಎಂದು ಕರೆದರೂ ಅತಿಯಾಗಿಬಿಡುತ್ತದೆ ಎನ್ನುವ ಭಯ. ಒಂದೊಂದು ದಿನ ಊರಿನ ಅಳಿದುಳಿದ ಗಾಂಧಿವಾದಿಗಳ ಪ್ರಾರ್ಥನಾ ಸಭೆ. ಒಂದೆರಡು ಜಾತ್ಯತೀತ ಭಜನೆ. ಅದೂ ಏನಾದರೂ ವಿಶೇಷ ದಿನವಾದರೆ. ಇಲ್ಲವಾದರೆ ಅದೂ ಇಲ್ಲ.

ಈಗಷ್ಟು ವರ್ಷದ ಹಿಂದೆ ಆಶ್ರಮದ ಗೋಡೆಗೆ ತಾಗಿಕೊಂಡಂತೆ ಕೆಳಗೆ ಹರಿಯುತ್ತಿದ್ದ ಸಾಬರಮತಿ ನದಿ. ವರ್ಷದ ಮುಕ್ಕಾಲು ಭಾಗದಲ್ಲಿ ನೀರ ತೊರೆಯಾಗಿ, ನಂತರ ಊರ ಕೊಳೆಯೆಲ್ಲಾ ಸೇರುವ ಗಲೀಜು ಜಾಗ. ಈಗ ಕೆಲವು ವರ್ಷಗಳಿಂದ 'ಸಾಬರಮತಿ ರಿವರ್ ಫ್ರಂಟ್' ಎನ್ನುವ ಅತ್ಯಾಧುನಿಕ ಯೋಜನೆಯ ಭಾಗವಾಗಿ ಬೃಹತ್ ಕಾಂಕ್ರೀಟ್ ಗೋಡೆಗಳ ನಡುವೆ ವರ್ಷವೆಲ್ಲಾ ಮೈತುಂಬಿಕೊಂಡು ಹರಿಯುವ ಕೃತಕವಾದ ನೀರಿನ ನಾಲೆ. ಅದರಲ್ಲಿ ಹರಿಯುವುದು ನರ್ಮದೆಯ ನೀರು. ನದಿಯ ಇಕ್ಕೆಲದಲ್ಲೂ ಸುಮಾರು ಮೂವತ್ತು ಅಡಿಯಷ್ಟು ಕಾಂಕ್ರೀಟಿನ ವಿಹಾರ ಸ್ಥಳ. ಹಲವಾರು ಅಂತರರಾಷ್ಟ್ರೀಯ ನಗರೀಕರಣ ಪ್ರಶಸ್ತಿಗಳಿಗೆ ಭಾಜನವಾದ ಬಹಳ ಮಹತ್ವಾಕಾಂಕ್ಷೆಯ ಯೋಜನೆ. ಬಂದವರು ಈ ರಿವರ್ ಫ್ರಂಟ್‌ನ ಸೌಂದರ್ಯವನ್ನೇ ಆಸ್ವಾದಿಸುವಾಗ, ನಾವು ಸಂಕೋಚದಿಂದ, 'ಆಶ್ರಮವನ್ನು ಮೊದಲು ನೋಡಿಬಿಡೋಣ. ಕೆಳಗಿನ ರಿವರ್ ಫ್ರಂಟಿಗೆ ಹೋಗುವುದು ಹೇಗೂ ಇದೆ' ಎನ್ನುವುದು.

ಅಣತಿ ದೂರದಲ್ಲಿ ಇನ್ನೊಂದು ಹೆಂಚಿನ ಮನೆಯಲ್ಲಿ ಹಲವು ಬಗೆಯ ಚರಕಗಳ ವಸ್ತು ಸಂಗ್ರಹಾಲಯ. ಗಾಂಧೀ